ವರ್ತಮಾನವನ್ನಾಗಲಿ ಅರಿತುಕೊಳ್ಳುವುದಕ್ಕೆ ಅದು ತುಂಬಾ ಸಹಕಾರಿ. ಈ ಕಾರಣಕ್ಕಾಗಿಯೇ ನಾನು ಆರಂಭದಲ್ಲಿ ಜಾನಪದದೆಡೆ ಆಕರ್ಷಿತನಾದದ್ದು. ಅಲ್ಲಿ ಅಪಾರವಾದುದನ್ನು ಕಲಿತೆ. ಲಿಖಿತ ಚರಿತ್ರೆಗಿಂತಲೂ ಭಿನ್ನವಾದ ಸಮಾಜದ ದರ್ಶನವಾಗುವುದೇ ಅಲ್ಲಿ. ನನ್ನ ದೃಷ್ಟಿಯಲ್ಲಿ ಲಿಖಿತ ಚರಿತ್ರೆಯ ಚೌಕಟ್ಟು ಹತ್ತು ಹಲವು ಕಾರಣಗಳಿಗಾಗಿ ತುಂಬಾ ಸಂಕುಚಿತವಾಗಿರುತ್ತದೆ. ಆದರೆ ಜಾನಪದದ್ದು ಹಾಗಲ್ಲ. ಅಲ್ಲಿ ವ್ಯಕ್ತಿಪ್ರಧಾನ ಬದುಕಿಗೆ ಹೆಚ್ಚು ಒತ್ತು ಇರುವುದರಿಂದ ವ್ಯಕ್ತಿಯ ಸಂಭ್ರಮ-ಸಂಕಟಗಳ ಜೊತೆಗೆ ಸಮಾಜದ ಸಂಭ್ರಮ ಮತ್ತು ಸಂಕಟಗಳು ಸಿಗುತ್ತವೆ. ಅವುಗಳನ್ನು ಗ್ರಹಿಸಿ ಹೆಕ್ಕಿ ತೆಗೆಯುವುದರಲ್ಲಿಯೇ ಜಾನಪದದ ಸರಿಯಾದ ನಿರ್ವಚನ ಸಾಧ್ಯ ಎಂಬುದು ನನ್ನ ಗಟ್ಟಿ ನಂಬಿಕೆ.

**◆ ಅಂಬೇಡ್ಕರ್ ತಮ್ಮ ಬರಹಗಳ ಸ್ಥಾಯಿಭಾವ. ವರ್ತಮಾನ ಭಾರತಕ್ಕೆ ಅಂಬೇಡ್ಕರ್ ಏಕೆ ಮುಖ್ಯ?**

ಅಂಬೇಡ್ಕರ್ ಸಾರ್ವಕಾಲಿಕವಾದ ಬೌದ್ಧಿಕ ಶಕ್ತಿಯ ಜೊತೆಗೆ ಸ್ವಾಭಿಮಾನದ ಶಕ್ತಿಯನ್ನು ದಕ್ಕಿಸಿ ಕೊಡುತ್ತಾರೆ. ಈ ದೇಶದ ಪರಂಪರಾಗತ ಬೌದ್ಧಿಕ ತಿಳಿವಳಿಕೆಗೆ ಬಹಿರಂಗವಾಗಿ ಆತ್ಯಂತಿಕವಾದ ಪ್ರತಿರೋಧವನ್ನು ಒಡ್ಡಿದವರಲ್ಲಿ ಅಂಬೇಡ್ಕರ್ ಮೊದಲಿಗರು. ಶತಮಾನಗಳಿಂದಲೂ ವ್ಯವಸ್ಥಿತವಾಗಿ ರೂಢಿಗತಗೊಳಿಸಿದ್ದ ಸಾಮಾಜಿಕ ಬದುಕಿಗೆ ಎದೆಯೊಡ್ಡಿ ನಿಂತವರು ಅಂಬೇಡ್ಕರ್. ಹಾಗೆ ನಿಲ್ಲುವುದು ಸಾಮಾನ್ಯದ ಸಂಗತಿಯಲ್ಲ. ಅದಕ್ಕೆ ಅಪಾರವಾದ ಓದು, ತಿಳಿವಳಿಕೆ, ಮುನ್ನೋಟ... ಎಲ್ಲವೂ ಬೇಕು. ಅವೆಲ್ಲದರಲ್ಲೂ ಅಂಬೇಡ್ಕರ್‌ರನ್ನು ಸರಿಗಟ್ಟುವವರು ಇಂದಿಗೂ ನನಗೆ ಕಾಣಿಸಿಲ್ಲ. ಅವರ ದೂರದೃಷ್ಟಿಯ ಫಲದಿಂದಲೇ ಇಂದು ನಮ್ಮ ಕಣ್ಣಮುಂದಿನ ಸವಾಲುಗಳನ್ನು ಅರಿತುಕೊಳ್ಳಲಿಕ್ಕೆ ಸಾಧ್ಯವಾಗುತ್ತಿದೆ ಎನ್ನುವುದು ನನ್ನ ಅಪಾರವಾದ ನಂಬಿಕೆ.

ವರ್ತಮಾನದಲ್ಲಿ ರಾಷ್ಟ್ರೀಯತೆಯ ಕುರಿತಾದ ಮರುನಿರೂಪಣೆಗೆ ದೇಶದ ಹೆಮ್ಮೆಯ ಚರಿತ್ರೆಗೆ ಮಾತ್ರ ಅನುಕೂಲವಾಗಬಲ್ಲ ಸಂಗತಿಗಳನ್ನು ಮೂಲದ್ರವ್ಯವನ್ನಾಗಿಸಿಕೊಳ್ಳಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅಂತಹ ಮೂಲದ್ರವ್ಯಗಳ ನಿಖರ ಸತ್ಯವನ್ನು ಶೋಧಿಸಲು ಅಂಬೇಡ್ಕರ್ ಚಿಂತನೆಗಳು ತುಂಬಾ ಅಗತ್ಯ ಎನ್ನುವುದು ನನ್ನ ತಿಳಿವಳಿಕೆ.

**◆ ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ತಾವು ಬುದ್ಧನ ಕುರಿತ ಅನೇಕ ಸ್ಮರಣೀಯ ಸೃಜನಾತ್ಮಕ ಕೆಲಸಗಳನ್ನು ಮಾಡಿದ್ದೀರಿ. ಮುಂದಿನ ಯೋಜನೆಗಳ ಬಗ್ಗೆ ತಿಳಿಸಬಹುದೇ?**

ಅದು ನಾನು ಮಾಡಿದ್ದು ಎನ್ನುವುದಕ್ಕಿಂತ ಬುದ್ಧನ ತಾತ್ವಿಕ ಚಿಂತನೆಗಳು ಮಾಡಿಸಿದ್ದು ಎಂದರೆ ಅರ್ಥಪೂರ್ಣವೆನಿಸುತ್ತದೆ. ಬುದ್ಧನ ಕುರಿತು ಕೆಲಸ ಮಾಡಿದ್ದೇನೆ ಎನ್ನುವುದಕ್ಕಿಂತ ಬುದ್ಧನ ಜೀವಪರ ಕಾಳಜಿಯುಳ್ಳ ಆಲೋಚನೆಗಳು ಅದನ್ನು ಮಾಡಿಸಿವೆ ಎನ್ನುವುದನ್ನು ನಾನು ನಂಬುತ್ತೇನೆ. ಈ ನಿಟ್ಟಿನಲ್ಲಿ ಹಲವು ಹಿರಿಯ ವಿದ್ವಾಂಸರ ಸಹಕಾರದಿಂದ ಒಂದಷ್ಟು ಕೆಲಸಗಳಾಗಿವೆ. ಆಗಬೇಕಾದವುಗಳು ಇನ್ನೂ ಹಲವಿವೆ.

**◆ ಸೃಜನಶೀಲ ಲೇಖಕರೂ ಆದ ತಾವು ವಿಶ್ವವಿದ್ಯಾಲಯದ ಸಾಂಸ್ಥಿಕ ಹಾಗೂ ಆಡಳಿತಾತ್ಮಕ ಅನುಭವ ಹಂಚಿಕೊಳ್ಳಬಹುದೆ?**

ವಿಶ್ವವಿದ್ಯಾಲಯದ ಸಾಂಸ್ಥಿಕ ಹಾಗೂ ಆಡಳಿತಾತ್ಮಕ ಜವಾಬ್ದಾರಿಯನ್ನು ನಾನು ಕೇವಲ ಕರ್ತವ್ಯದ ಭಾಗವನ್ನಾಗಿಯಷ್ಟೇ ನಿರ್ವಹಿಸಿಲ್ಲ. ನನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿಯ ಭಾಗವನ್ನಾಗಿ ಮಾಡಿದ್ದೇನೆ. ಬಾಲ್ಯದಿಂದಲೂ ಅಳವಡಿಸಿಕೊಂಡ ಅಚ್ಚುಕಟ್ಟುತನ ಇಂದು ಇವುಗಳನ್ನು ಅತ್ಯಂತ ಸುಲಭವಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗಿದೆ.

**◆ ಲೇಖಕರಿಗೆ ಸಾಮಾಜಿಕ ಜವಾಬ್ದಾರಿ ಎಷ್ಟು ಮುಖ್ಯ?**

ಸಾಮಾಜಿಕ ಜವಾಬ್ದಾರಿ ಅಥವಾ ಬದ್ಧತೆ ಇಲ್ಲದಿದ್ದರೆ ಲೇಖಕನಾಗುವುದಕ್ಕೇ ಸಾಧ್ಯವಿಲ್ಲವೆಂದು ನಂಬಿದವನು ನಾನು. ಸಮಾಜ ಎನ್ನುವುದು ಸ್ಥಾವರ ಸ್ಥಿತಿಯದ್ದಲ್ಲ. ಅದು ಅವ್ಯಾಹತವಾಗಿ ಸಾಗುವ ಪ್ರಕ್ರಿಯೆ. ಸಮಾಜವೆಂದರೆ ಕೇವಲ ಬದುಕಲ್ಲ. ಅದು ಅಸ್ತಿತ್ವದ ವಿಕಾಸದ ನಡಿಗೆಯನ್ನು ಹೊತ್ತೊಯ್ಯುವ ಸಾಧನ. ಬದುಕಿನ ಚೈತನ್ಯದ ನಡಿಗೆಯದು. ಕಾಲಕಾಲಕ್ಕೆ ಅದು ಸ್ಥಿತ್ಯಂತರಗೊಳ್ಳುತ್ತಲೇ ಇರುತ್ತದೆ.